ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 21/03/2019

# ಗೋವಾ ಸಿಎಂ ಸಾವಂತ್ ವಿಶ್ವಾಸಮತ ಸಾಬೀತು



- ಸರ್ಕಾರದ ಪರ 20 ಶಾಸಕರ ಮತ
- ಬಿಜೆಪಿ ನಡೆ ವಿರುದ್ಧ ಶಿವಸೇನೆ ಕಿಡಿ

ಪಣಜಿ: ಮಾಜಿ ಸಿಎಂ ಮನೋಹರ ಪರ್ರಿಕರ್ ಮರಣಾನಂತರ ಗೋವಾ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಪ್ರಮೋದ್ ಸಾವಂತ್ ಬುಧವಾರ ವಿಶ್ವಾಸಮತ ಸಾಬೀತುಪಡಿಸಿದ್ದಾರೆ. 20 ಶಾಸಕರು ಬಿಜೆಪಿ ಪರ ಮತ ಹಾಕಿದ್ದಾರೆ. 15 ವಿರುದ್ಧ ಮತ ಬಿದ್ದಿವೆ.

ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದ್ದ ಸಾವಂತ್‌ಗೆ, ಬಿಜೆಪಿಯ 11 ಶಾಸಕರು, ಗೋವಾ ಫಾರ್ವರ್ಡ್ ಪಾರ್ಟಿ, ಮಹಾರಾಷ್ಟ್ರವಾದಿ ಗೋಮಂತಕ್ ಪಾರ್ಟಿಯ ತಲಾ 3 ಹಾಗೂ ಮೂವರು ಸ್ವತಂತ್ರರು ಬೆಂಬಲಿಸಿದ್ದಾರೆ. ಕಾಂಗ್ರೆಸ್‌ನ 14, ಎನ್‌ಸಿಪಿಯ ಒಬ್ಬ ಶಾಸಕ ಸರ್ಕಾರದ ವಿರುದ್ಧ ಮತ ಚಲಾವಣೆ ಮಾಡಿದ್ದರು.

ವಿಶ್ವಾಸಮತ ಸಾಬೀತಿನ ನಂತರ ಮಾತನಾಡಿದ ಸಾವಂತ್, ಮನೋಹರ ಪರ್ರಿಕರ್ ಸಿಎಂ ಆಗಿದ್ದಾಗ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಸಹಕಾರ ನೀಡಬೇಕು ಎಂದರು. ಈ ವೇಳೆ ಹಲವು ಬಾರಿ ಪರ್ರಿಕರ್ ನೆನಪಿಸಿಕೊಂಡು ಭಾವುಕರಾದರು. ಶಾಸಕ, ಸ್ಪೀಕರ್, ಸಿಎಂ ಆಗಲು ಅವರೇ ಕಾರಣ ಎಂದರು.

**ಬಿಜೆಪಿ ವಿರುದ್ಧ ಶಿವಸೇನೆ ಟೀಕೆ:** ಗೋವಾದ ಇತ್ತೀಚಿನ ಬೆಳವಣಿಗೆ ಬಗ್ಗೆ ತನ್ನ ಪಕ್ಷದ ಮುಖವಾಣಿಯಾದ 'ಸಾಮ್ನಾ'ದಲ್ಲಿ ಖಾರವಾಗಿ ಪ್ರತಿಕ್ರಿಯಿಸಿರುವ ಶಿವಸೇನೆ, 'ಪರ್ರಿಕರ್ ಚಿತೆ ಆರುವುದಕ್ಕೂ ಮುನ್ನವೇ ಚದುರಂಗದಾಟ ಶುರುವಾಗಿದ್ದು, ಪಕ್ಷಗಳಿಗೆ ನಾಚಿಕೆಗೇಡಿನ ಸಂಗತಿ. ಸೋಮವಾರ ಮಧ್ಯರಾತ್ರಿ ನೂತನ ಸಿಎಂ ಪ್ರಮಾಣ ವಚನ ಸ್ವೀಕರಿಸುವಂಥ ಅವಸರ ಏನಿತ್ತು' ಎಂದು ಪ್ರಶ್ನಿಸಿದೆ. 'ಬಿಜೆಪಿ ಜೊತೆ ಮೈತ್ರಿಯಾದ ಯಾವುದೇ ರಾಜ್ಯದಲ್ಲೂ ಡಿಸಿಎಂ ಹುದ್ದೆ ನೀಡಿಲ್ಲ ಎಂಬ ಕಾರಣ ನೀಡಿ, ಮಹಾರಾಷ್ಟ್ರದಲ್ಲಿ ಶಿವಸೇನೆಗೆ ಡಿಸಿಎಂ ಸ್ಥಾನ ನಿರಾಕರಿಸಲಾಯಿತು. ಆದರೆ ಈಗ 20 ಶಾಸಕರಿರುವ ರಾಜ್ಯದಲ್ಲಿ ಇಬ್ಬರು ಡಿಸಿಎಂಗಳನ್ನು ನೇಮಿಸಲಾಗಿದೆ' ಎಂದೂ ಶಿವಸೇನೆ ಟೀಕಿಸಿದೆ.